36, (88) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ. (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 12ನೇ ವಿಧಾನಸಭೆ 2ನೇ ಅಧಿವೇಶನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1841 ಪ್ರಶ್ನೆಗೆ ಜಿಲ್ಲಾ ಮುಖ್ಯ ರಸ್ತೆಗಳ ತಗ್ಗು ಗುಂಡಿ ತುಂಬುವ ಕೆಲಸ ಪೂರ್ಣಗೊಂಡಿದೆ ರಾಜ್ಯ ಹೆದ್ದಾರಿಗಳ ದುರಸ್ತಿ ಹಾಗೂ ನಿರ್ವಹಣೆ ಕೆಲಸಗಳು ಪ್ರಗತಿಯಲ್ಲದ್ದು ಮಾರ್ಚ್ 2005ರ ಅಂತ್ಯದೊಳಗೆ ಪೂರ್ಣಗೊಳ್ಳಲಿವೆ ಎಂದು ತಿಳಿಸಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಮಾರ್ಚ್ 2006 ಮುಗಿಯುತ್ತಾ ಬಂದರು ತಗ್ಗು ಗುಂಡಿಗಳು ಯಥಾ ಸ್ಥಿತಿಯಲ್ಲಿದ್ದು ಯಾವುದೇ ಕಾಮಗಾರಿಗಳು ಪ್ರಗತಿ ಯಾಗದಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಹೌದು.

ಆ) ಮಾರ್ಚ್ 2005ರಲ್ಲಿ ರಾಜ್ಯ ಹೆದ್ದಾರಿಗಳ ಮೇಲೆ ತಗ್ಗು ಗುಂಡಿ ತುಂಬುವ ಕಾಮಗಾರಿಗಳನ್ನು ಬಹುತೇಕ ಪೂರ್ಣಗೊಳಿಸಲಾಗಿತ್ತು ನಂತರ 2005ರ ಜುಲೈನಿಂದ ಪೂರ್ಣಗೊಳಿಸಲಾಗಿತ್ತು. ನಂತರ 2005 ಜುಲೈನಿಂದ ಅಕ್ಟೋಬರ್ 2005 ರವರೆಗೆ ಸುರಿದ ಭಾರಿ ಮಳೆಯಿಂದ ಹಾಗೂ ಪ್ರವಾಹದಿಂದ ರಸ್ತೆಗಳ ಮೇಲೆ ಹೆಚ್ಚಿನ ತಗ್ಗು ಗುಂಡಿಗಳು ಬಿದ್ದಿರುತ್ತವೆ.

ಇ) 2005–06ನೇ ಸಾಲಿಗೆ ಸಂಬಂಧಿಸಿದಂತೆ ಜಿಲ್ಲಾ ಮುಖ್ಯ ರಸ್ತೆಗಳ ಮೇಲಿನ ತಗ್ಗು ಗುಂಡಿಗಳನ್ನು ಲೆಕ್ಕ ಶೀರ್ಷಿಕೆ 3054 ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಅಡಿಯಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯ ಹೆದ್ದಾರಿಗಳ ನಿರ್ವಹಣೆಗೆ ಸಂಬಂಧಿಸಿದಂತೆ 2005–06 ರಿಂದ 3 ವರ್ಷಗಳ ನಿರ್ವಹಣೆ ಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಪ್ಯಾಕೇಜ್ ಮುಖಾಂತರ ಗುತ್ತಿಗೆ ನೀಡಲಾಗಿದ್ದು ಗುಂಡಿ ತುಂಬುವ ಕೆಲಸ ಪ್ರಗತಿ ಯಲ್ಲಿರುತ್ತದೆ. ಹಾಗೂ ಹಂತಹಂತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗುವುದು.

37, (191) ಶ್ರೀ ಎನ್. ಹೆಚ್. ಶಿವಶಂಕರ್ ರೆಡ್ಡಿ (ಗೌರಿಬಿದನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗೌರಿಬಿದನೂರಿನಲ್ಲಿ ಅಗ್ನಿಶಾಮಕ ದಳ ಪ್ರಾರಂಭಿಸಲು ರೂ.45 ಲಕ್ಷ ಬಿಡುಗಡೆ ಮಾಡುವುದರ ಬಗ್ಗೆ ಸರ್ಕಾರವು ಕೈಗೊಂಡಿರುವ ನಿಲುವೇನು;

ಆ) ಈ ಸಾಲಿನ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗುವುದೆ ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಗೌರಿಬಿದನೂರು ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರದ ಆದೇಶ ಸಂಖ್ಯೆ:ಒಇ 163 ಕಅಸೇ 96, ದಿನಾಂಕ:31-03-1997ರಲ್ಲಿ ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಮುಂಬರುವ ಆರ್ಥಿಕ ಸಾಲಿನಲ್ಲಿ ಅನುದಾನ ಒದಗಿಸಲು ಪರಿಗಣಿಸಲಾಗುವುದು.

ಆ) 'ಅ'ಪ್ರಶ್ನೆಗಳಿಗೆ ಉತ್ತರಿಸಿದಂತೆ.

38, (244) ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್. (ಗೌರಿಬಿದನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗೌರಿಬಿದನೂರು ತಾಲ್ಲೂಕಿನಾದ್ಯಾಂತ ಇರುವ ಮುಸ್ಲಿಂ ಬಾಂಧವರ ಮಸೀದಿಗಳ ಸಂಖ್ಯೆ ಎಷ್ಟು ?

ಆ) ಇವುಗಳ ಪೈಕಿ ಹಣ ಬಿಡುಗಡೆ ಮಾಡಿರುವ ಮತ್ತು ಹಣ ಬಿಡುಗಡೆ ಮಾಡದೇ ಇರುವ ಮಸೀದಿಗಳ ಸಂಖ್ಯೆ ಎಷ್ಟು (ಮಸೀದಿವಾರು ಹಣದ ವಿವರ ಒದಗಿಸುವುದು) ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಗೌರಿಬಿದನೂರು ತಾಲ್ಲೂಕಿನಾದ್ಯಾಂತ ವಕ್ಫ್ ಬೋರ್ಡಿನಲ್ಲಿ ನೋಂದಾಯಿತ 31 ಮಸೀದಿಗಳು ಇರುತ್ತವೆ.

ಆ) 13 ವಿವಿಧ ಮಸೀದಿಗಳಿಗೆ 2001-02, 2002-03, 2003-04 ಹಾಗೂ 2004-05, 2005-06ರ ಸಾಲಿನಲ್ಲಿ ಒಟ್ಟು ರೂ. 2,85,000-00ಗಳ ಸಹಾಯ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 18 ಮಸೀದಿಗಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ ಬಿಡುಗಡೆ ಮಾಡಿದ 13 ಮಸೀದಿಗಳು ಹಾಗೂ ಅವುಗಳಿಗೆ ಹಣ ಬಿಡುಗಡೆ ಮಾಡಿದ ವಿವರವನ್ನು ಲಗತ್ತಿಸಿದ ಅನುಬಂಧದಲ್ಲಿ ಒದಗಿಸಿದೆ.

ವಿಧಾನ ಸಭೆ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 244ಕ್ಕೆ ಅನುಬಂಧ

ಗೌರಿ ಬಿದನೂರು ತಾಲ್ಲೂಕಿನ ವಿವಿಧವಕ್ಫ್ ಸಂಸ್ಥೆಗಳಿಗೆ 2001-02, ಮತ್ತು 2003-04 ಹಾಗೂ 2004-05ರ (ಮಸೀದಿಗಳಿಗೆ) ನೀಡಿರುವ ಅನುದಾನದ ಬಗ್ಗೆ.